

## ಮನಸೂರೆಗೊಂಡ ಕಲಾಕೃತಿ

ಕೀಟ ಪ್ರಪಂಚದಲ್ಲಿ 'ಪೊರೆ ಕಳಚುವಿಕೆ' ಎಂಬುದೊಂದು ವಿಶಿಷ್ಟ ವಿದ್ಯಮಾನ. ತಮ್ಮ ಹಳೆಯ ದೇಹಕವಚವನ್ನು ಕಳಚಿ ಹೊಸ ಕವಚ ಧರಿಸುವ ಈ ಕ್ರಿಯೆ ಸರೀಸೃಪಗಳಲ್ಲೂ ಕಂಡುಬರುತ್ತದೆ. ಚಿತ್ರದಲ್ಲಿರುವ ಈ ಎರಡೂ ಕೀಟಗಳು ಹೊಸ ಕವಚಧರಿಸಿ ತಮ್ಮ ಹಳೆಯ ಅವಶೇಷಗಳನ್ನು ಬಿಟ್ಟು ಹೋಗಿವೆ ಆದರೆ ಈ ಎರಡೂ ಕೀಟಗಳು ಏಕಕಾಲದಲ್ಲಿ ಅದೂ ಮಿಲನ ಸಂದರ್ಭದಲ್ಲಿಯೇ ಹಳೆಯ ಕವಚದಿಂದ ಬೇರ್ಪಟ್ಟಿರುವುದು ಸೋಜಿಗವೇ ಸರಿ. ತಮ್ಮದೇ ಲೋಕದಲ್ಲಿ ವಿಹರಿಸುತ್ತಿರುವ ಪ್ರೇಮಿಗಳಿಬ್ಬರನ್ನು ಕಲ್ಲಿನಲ್ಲಿ ಕಡೆದಿಟ್ಟ ಶಿಲ್ಪಗಳಂತೆ ಚಿತ್ರಿಸಿರುವ ನಿಸರ್ಗದ ಶಕ್ತಿಗೆ ತಲೆಬಾಗಲೇಬೇಕು.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

## ಪ್ರಾಣಿ ಪ್ರಿಯರ ಆರೈಕೆಯಲ್ಲಿ ಇಗುವಾನ

ಆಫ್ರಿಕಾದ ಕಾಡುಗಳಲ್ಲಿ ಕಂಡುಬರುವ ಇಗುವಾನ ವಿಚಿತ್ರ ಆಕಾರದ ಪ್ರಾಣಿ. ನೋಡಲು ಎಷ್ಟು ಭೀಕರವೋ ಅಷ್ಟೇ ಸಾಧು ಕೂಡ. ಯಾವುದೋ ಸರ್ಕಸ್ ಕಂಪನಿಯವರು ಸಾಕಲಾಗದೇ ಕೈಬಿಟ್ಟಾಗ ಅದನ್ನು ತಂದು ಜೋಪಾನ ಮಾಡುತ್ತಿರುವವರು ಶಿರಸಿಯ ಪ್ರಾಣಿತಜ್ಞರಾದ ರಾಜೇಂದ್ರ ಶಿರ್ಸಿಕರ್.

ಶಿರಸಿಯಲ್ಲಿ ಅನಾಥ ಪ್ರಾಣಿ ಪಕ್ಷಿಗಳ ಪುನರ್ವಸತಿ ಕೇಂದ್ರವೊಂದನ್ನು ಕಳೆದ ಎರಡು ವರ್ಷಗಳಿಂದ ಇವರು ನಡೆಸುತ್ತಿದ್ದಾರೆ. ಕಾರಣಾಂತರಗಳಿಂದ ಅನಾಥವಾದ, ಗಾಯಗೊಂಡ ಪ್ರಾಣಿ ಪಕ್ಷಿಗಳಿಗಾಗಿಯೇ ಅವರ ಸೇವಾ ಸಂಸ್ಥೆ ಕಳೆದೆರಡು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ. ನಗರದ ಹೊರವಲಯದಲ್ಲಿ ಬನವಾಸಿ ರಸ್ತೆಯ ಶ್ರೀನಗರದಲ್ಲಿ ಸ್ವಲ್ಪ ಜಾಗವನ್ನು ಇಂತಹ ಪ್ರಾಣಿ ಪಕ್ಷಿಗಳಿಗಾಗಿ ಮೀಸಲಿಟ್ಟಿದ್ದಾರೆ. ತಾವೇ ಸ್ವತಃ ಅವುಗಳ ಕಾಳಜಿ ಮಾಡುತ್ತ, ಆಹಾರ ನೀಡುತ್ತ ಖುಷಿ ಕಾಣುತ್ತಿರುವ ರಾಜೇಂದ್ರ ಅವರ ಆಸಕ್ತಿ, ಪ್ರಾಣಿ ಪ್ರೀತಿ ಅನುಕರಣೀಯ.

—ಅರ್ಚನಾ ಬೊಮ್ನಳ್ಳಿ, ಶಿರಸಿ





## ದರ್ಜಿ ಹಕ್ಕಿ

ಮೊನ್ನೆ ಊರ ಪಕ್ಕದ ತೋಟದಲ್ಲೊಂದು ದರ್ಜಿ ಹಕ್ಕಿ ಕಣ್ಣಿಗೆ ಬಿತ್ತು. ಅದು ಗೂಡು ಕಟ್ಟುವ ತಯಾರಿಯಲ್ಲಿ ಚೂಪಾದ ಹಕ್ಕಿಯ ಪುಕ್ಕವೊಂದನ್ನೆತ್ತಿಕೊಂಡು ಹೊರಟಿತ್ತು. ದರ್ಜಿ ಹಕ್ಕಿಯನ್ನು ಹೊಲಿಗೆ ಹಕ್ಕಿ, ಸಿಂಪಿಗ ಎಂದೂ ಕರೆಯುವರು. ವೈಜ್ಞಾನಿಕವಾಗಿ ಆರ್ಥೋಟಾಮಸ್ ಸುಟಾರಿಯಸ್ ಎನ್ನುವರು. ಇದು ಸಸ್ಯದ ನಾರು ಬಳಸಿ, ಉದ್ದವಿರುವ ವಕ್ರವಾದ ಕೊಕ್ಕಿನಿಂದ ಎಲೆಗಳ ಗೂಡು ಕಟ್ಟುತ್ತದೆ.

ಹಸಿರು ಇಲ್ಲವೇ ಬೂದು ಮೇಲ್ಭಾಗ, ಹಳದಿ ಮಿಶ್ರಿತ ಬಿಳಿಯ ಕೆಳಭಾಗವಿರುತ್ತದೆ. ತಲೆಯ ಮೇಲೆ ಕಂದುಗೆಂಪು ಬಣ್ಣವಿದೆ. ಬಲಿಷ್ಠ ಕಾಲುಗಳು ಮತ್ತು ಚಿಕ್ಕ ಬಾಲವಿದ್ದೂ ಸದಾ ಅದನ್ನು ಮೇಲಕ್ಕೆ ಎತ್ತಿ ಹಿಡಿದಿರುತ್ತದೆ. ಹುಲ್ಲುಗಾವಲು ತೋಟಗಳಲ್ಲಿ ಕಂಡು ಬರುವ ಇದು ಹುಳು ಹುಪ್ಪಡಿಗಳನ್ನು ತಿನ್ನುವ ಏಶಿಯಾದ ಸಾಮಾನ್ಯ ಪಕ್ಷಿಯಾಗಿದೆ.

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು